ಅಮೃತಶಿಲೆಯಲ್ಲೇ ಕೆತ್ತಿಸಿ ಅಂಟಿಸಿದರು. ಕ್ರಮೇಣ ಮನೆಯ ನೆಲಕ್ಕೆ ಮಾರ್ಬಲ್ ತರಿಸಿ ಹಾಕಿಸಿದ್ದರು. ಅಡುಗೆ ಮನೆಯ ಕಟ್ಟೆಗಳೂ ಮಾರ್ಬಲಿನದ್ದೇ. ಕಡೆಗೆ, ಮನೆಯ ಹೊರಗೆ ಹೂವಿನ ಗಿಡಗಳ ನಡುವೆ ಮಾರ್ಬಲ್ ಬೆಂಚು ಹಾಕಿಸಿದ್ದರು. “ಹಾರಕ್ಕೆ ಮುತ್ತು ಹೆಚ್ಚಾತೂಂತ ಗಡ್ಡಕ್ಕೆ ಪೋಣಿಸಿದ್ನಡ” ಎಂದು ಗುಳುಗುಳು ನಕ್ಕಿದ್ದ ಊರವರು, ಮಹಾಬಲ ರಾಯರಿಗೆ “ಮಾರ್ಬಲ್ ರಾವ್” ಎಂದು ಮರುನಾಮಕರಣ ಮಾಡಿದ್ದರು. ಅದು ಅವರಿಗೂ ತಿಳಿದಿತ್ತು, ಈ ಬಗ್ಗೆ ಅವರಲ್ಲಿ ಒಂಥರಾ ಖುಷಿಯೂ ಇತ್ತೆನ್ನಿ!

★★★

ಇಷ್ಟೊಂದು ಸುಭಿಕ್ಷವಾಗಿದ್ದ ಈ ನೆರೆಹೊರೆಯಲ್ಲಿ ಇಷ್ಟೊಂದು ಪ್ರಕ್ಷುಬ್ಧತೆ ಏಕಾಯಿತು ಎನ್ನುವುದೀಗ ಪ್ರಶ್ನೆ. ಮಾರ್ಬಲ ರಾಯರ ಮನೆಯಲ್ಲಿ ಈಗ ಇರುವುದು ಇಬ್ಬರೇ. ಮನೆಯ ಹಿರಿಯರು ಬದುಕು ಮುಗಿಸಿ ತೆರಳಿದ್ದರೆ, ಕಿರಿಯರು ಬದುಕು ಕರೆದಲ್ಲಿ ತೆರಳಿದ್ದರು. ಮೊದಲಿನಿಂದಲೂ “ಡಾ. ಮಹಾಬಲ ರಾವ್” ಅವರ ಪ್ರಾಕ್ಟೀಸು ನಡೆಯುತ್ತಿದ್ದುದು ಆಗೊಮ್ಮೆ ಈಗೊಮ್ಮೆಯೆ. ಅವರನ್ನು ಸದಾ ವ್ಯಸ್ತವಾಗಿಡುವಷ್ಟು ಕೆಲಸ ಕುದುರಲೇ ಇಲ್ಲ. ಮನೆಯಲ್ಲಿ ನಾಲ್ಕಾರು ಎಕರೆ ಕೃಷಿ ಜಮೀನೂ ಇತ್ತಾದ್ದರಿಂದ ಡಾಕ್ಟರಿಕೆ ಬಗ್ಗೆ ಅವರು ತಲೆ ಕೆಡಿಸಿಕೊಂಡವರೇ ಅಲ್ಲ. ಐದಾರು ವರ್ಷಗಳ ಹಿಂದೆ ಮಗಳ ಮದುವೆಯಾದಾಗ ಹೊಸ ಅಳಿಯ ಅವರಿಗೊಂದು ಹೊಸ ಐಡಿಯಾ ನೀಡಿದ್ದ. ‘ಇಷ್ಟೊಂದು ಒಳ್ಳೆಯ ಪರಿಸರದಲ್ಲಿ, ದೊಡ್ಡ, ಚಂದದ ಮನೆಯಲ್ಲಿ ಇಬ್ಬರೇ ಬದುಕುತ್ತಿರುವ ನೀವು ‘ಹೋಂ ಸ್ಟೇ’ಯನ್ನೇಕೆ ಮಾಡಬಾರದು’ ಎಂದು ರಾಯರ ತಲೆಗೊಂದು ಹುಳ ಬಿಟ್ಟಿದ್ದ. ನಗರದಲ್ಲೇ ಹುಟ್ಟಿ ಬೆಳೆದಿದ್ದ ಆತನಿಗೆ ಪ್ರಶಾಂತ ಪರಿಸರದಲ್ಲಿದ್ದ ಮಾವನ ಮನೆ ಒಂದು ರೆಸಾರ್ಟ್‌ನಂತೆ ಕಂಡಿತ್ತೇನೊ!

